| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>KA-1 | 15 ನಿ | ಕನ್ನಡ<br>1. ಠಣ್! ಠಣ! ಠಣ! | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗಳು, ಗೀತೆಗಳು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು. | ಅಭಿನಯ ಗೀತೆ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ, ""ಅಮ್ಮ ನಂಗೆ ಪುಟ್ಟದೊಂದು ಗೊಂಬೆ......" ಎಂಬ ಅಭಿನಯ ಗೀತೆಯನ್ನು ಅಭಿನಯ ಮಾಡಿಸುವುದು | ಕನ್ನಡ<br>1. ಕೋಗಿಲೆ (ಕವನ) | ಸರಳ ಹಾಗೂ ಬಳಕೆಯಲ್ಲಿರದ ಜನಪ್ರಿಯ ಪ್ರಾಸ ಗೀತೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು. | ಅಭಿನಯ ಗೀತೆ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ತರಗತಿ ಒಂದರಲ್ಲಿ ಸೂಚಿಸಿದ ಚಟುವಟಿಕೆಯನ್ನು ಮಾಡಿಸುವುದು (ಒಟ್ಟಿಗೆ) |
| | 25 ನಿ | | | ಚಿತ್ರ ಪಟಗಳು (ಬಕ, ದನ, ಮರ, ನಾಣ್ಯ) | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>ಶಿಕ್ಷಕರು ""ಠಣ್! ಠಣ! ಠಣ!" ಕವನವನ್ನು ರಾಗವಾಗಿ ಅಭಿನಯದೊಂದಿಗೆ ಹೇಳುವರು. (2–3 ಬಾರಿ ಹೇಳುವರು) ನಂತರ ಮಕ್ಕಳಿಂದ ಹೇಳಿಸುವರು. | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಶಿಕ್ಷಕರ ಸೂಚನೆಯಂತೆ ಮಕ್ಕಳು ತಮಗೆ ತಿಳಿದಿರುವ ಕಥೆಗಳನ್ನು ಹೇಳುವರು. (ಅಥವಾ ಡಿ.ಎಸ್.ಇ.ಆರ್.ಟಿ. ವತಿಯಿಂದ ನೀಡಿರುವ ""ದೀಪ್ ದೀಪ್ ನಂಜುಂಡ, ಕಥೆ ಕಥೆ ಕಾರುಂಡ" ಧ್ವನಿಸುರುಳಿ ಕೇಳಿಸುವುದು). |
| | 5 ನಿ | | | ಸೀಮೆಸುಣ್ಣ ಹುಣಸೇಬೀಜ | ಶಿಕ್ಷಕ | ಮಕ್ಕಳನ್ನು ಚಿಕ್ಕ–ಚಿಕ್ಕ ಗುಂಪುಗಳಲ್ಲಿ ಕೂರಿಸಿ, ಅವರ ಮುಂದೆ ಸೀಮೆಸುಣ್ಣದಿಂದ ಆಕೃತಿಗಳನ್ನು ಬರೆದು ಅದರ ಮೇಲೆ ಹುಣಸೇಬೀಜ ಅಥವಾ ಕಲ್ಲುಗಳನ್ನು ಜೋಡಿಸುವಂತೆ ಸೂಚಿಸುವರು (ಅಥವಾ ಸರಳ ಶಿಶುಪ್ರಾಸಗಳ ಧ್ವನಿಸುರುಳಿಗಳನ್ನು ಕೇಳಿಸುವುದು. ಉದಾ : ಡಿ.ಎಸ್.ಇ.ಆರ್.ಟಿ. ವತಿಯಿಂದ ನೀಡಿರುವ ""ಹುಯ್ಯೋ ಹುಯ್ಯೋ ಮಳೆರಾಯ"). | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ಮಕ್ಕಳು ಭಾಗವಹಿಸುವರು. |
| | 25 ನಿ | | | | ಭಾಗಶಃ ಶಿಕ್ಷಕ | ಶಿಕ್ಷಕರ ಸೂಚನೆಯತೆ ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. | | | ಕೋಗಿಲೆಯ ಚಿತ್ರಪಟ | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>ಶಿಕ್ಷಕರು ""ಕೋಗಿಲೆ" ಕವನವನ್ನು ಸ್ವರಭಾರದೊಂದಿಗೆ ಅಭಿನಯಿಸುತ್ತಾ ಹಾಡುವರು (2–3 ಬಾರಿ). ನಂತರ ಮಕ್ಕಳಿಂದ ಹಾಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳಿಗೆ ನೀಡಿರುವ ಚಟುವಟಿಕೆಯನ್ನು ಶಿಕ್ಷಕರು ಗಮನಿಸಿ, ಸಲಹೆ ನೀಡುವರು. | | | | ಹಿರೇಮಣಿ | ಹಿರೇಮಣಿಯ ಸಹಾಯದೊಂದಿಗೆ, ಮಕ್ಕಳು ಗುಂಪಿನಲ್ಲಿ ಪುಸ್ತಕ ನೋಡಿಕೊಂಡು ಹಾಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2 ನೇ**<br>**M-1** | 15 ನಿ | ಗಣಿತ<br>ಸಂಖ್ಯೆಗಳು | * ಒಂದರಿಂದ ಐದರವರೆಗಿನ ಸಂಖ್ಯೆಗಳನ್ನು ಗುರುತಿಸುವುದು | ಅಭಿನಯ ಗೀತೆ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಎಲ್ಲಾ ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ. ""ಒಂದು ಒಂದು ಒಂದು, ನನ್ನ ಹೆಸರು ಒಂದು...." ಎಂಬ ಹಾಡನ್ನು ಅಭಿನಯದೊಂದಿಗೆ ಹೇಳಿಕೊಡುವರು. | ಗಣಿತ<br>ಸಂಖ್ಯೆಗಳು | * ಒಂದರಿಂದ ತೊಂಬತ್ತೊಂಬತ್ತರವರೆಗಿನ ಸಂಖ್ಯೆಗಳನ್ನು ಗುರುತಿಸುವುದು, ಎಣಿಸುವುದು ಮತ್ತು ಬರೆಯುವುದು. | 1 ರಿಂದ 99ರವರೆಗಿನ ಮಗ್ಗಿ ಕೋಷ್ಟಕ. ಕಡ್ಡಿಗಳು. ಬೀಜಗಳು ಮಿಂಚು ಪಟ್ಟಿಗಳು (20ರಿಂದ50) | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ತರಗತಿ ಒಂದರಂತೆ ಚಟುವಟಿಕೆ ನಿರ್ವಹಿಸುವುದು. |
| | 25 ನಿ | | | ಮಿಂಚುಪಟ್ಟಿ ಬೀಜಗಳು, ಕಲ್ಲು, ಕಡ್ಡಿಗಳು | ಭಾಗಶಃ ಶಿಕ್ಷಕ ಮತ್ತು ಸ್ವ–ಕಲಿಕೆ | ಮಕ್ಕಳನ್ನು ಸಣ್ಣ–ಸಣ್ಣ ಗುಂಪುಗಳಾಗಿ ಕೂರಿಸಿ, ಸಂಖ್ಯಾಸೂಚಕಗಳನ್ನು ಬರೆದು ಅವುಗಳ ಮೇಲೆ ಬೀಜಗಳನ್ನು / ಕಲ್ಲುಗಳನ್ನು ಜೋಡಿಸುವಂತೆ ಹೇಳುವರು. ಮಕ್ಕಳು ಶಿಕ್ಷಕರ ಸೂಚನೆಯಂತೆ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>* 1 ರಿಂದ 50ರವರೆಗಿನ ಸಂಖ್ಯಾಕೋಷ್ಟಕ ಬಳಸಿ, ಸಂಖ್ಯೆಗಳನ್ನು ಪರಿಚಯಿಸುವರು.<br>* ಮಿಂಚುಪಟ್ಟಿಗಳನ್ನು ಬಳಸಿ, ಬಿಡಿ–ಬಿಡಿಯಾಗಿ ಸಂಖ್ಯೆಗಳ ಪರಿಚಯ ಮಾಡಿಕೊಡುವರು.<br>* ಕೋಷ್ಟಕ ನೋಡಿಕೊಂಡು ಮಕ್ಕಳಿಂದ ಸಂಖ್ಯೆಗಳನ್ನು ಹೇಳಿಸುವರು.<br>* ಪಠ್ಯಪುಸ್ತಕದ ಪುಟಸಂಖ್ಯೆ 8 ಮತ್ತು 9ರಲ್ಲಿರುವ ಚಟುವಟಿಕೆ – 1, 2, 3, 4ನ್ನು ಮಾಡಿಸುವರು. |
| | 05 ನಿ | | | | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>* ಒಂದರಿಂದ 5ರ ವರೆಗಿನ ಮಿಂಚುಪಟ್ಟಿಗಳನ್ನು ಬಳಸಿ, 1 ರಿಂದ 5ರವರೆಗೆ ಸಂಖ್ಯೆಗಳನ್ನು ಪರಿಚಯಿಸುವರು.<br>* ತರಗತಿ ಕೋಣೆಯಲ್ಲಿ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ಮಕ್ಕಳಲ್ಲಿ 1 ರಿಂದ 5ರವರೆಗಿನ ಕಲ್ಪನೆ ಮೂಡಿಸುವರು.<br>(ಉದಾ : 1 ಮೇಜು, 2 ಕಿಟಕಿಗಳು ಇತ್ಯಾದಿ)<br>* ಪಠ್ಯಪುಸ್ತಕದಲ್ಲಿನ ಪುಟಸಂಖ್ಯೆ 8, 9ರಲ್ಲಿರುವ ಚಟುವಟಿಕೆಗಳನ್ನು (ಚಟುವಟಿಕೆ–1,2,3,4ನ್ನು) ಮಾಡಿಸುವರು ಹಾಗೂ ಮುಂದುವರಿಸಲು ತಿಳಿಸುವರು. | | | | ಶಿಕ್ಷಕ | ಕಲಿಕೆಯ ಹಂತದಲ್ಲಿ ಶಿಕ್ಷಕರು ಮಾಡಿಸಿದ ಚಟುವಟಿಕೆಗಳನ್ನು ಹಿರೇಮಣಿಯ ನೇತೃತ್ವದಲ್ಲಿ ನಿರ್ವಹಿಸುವಂತೆ ಸೂಚನೆ ನೀಡುವರು. |
| | 25 ನಿ | | | | | | | | | ಹಿರೇಮಣಿ | ಮಕ್ಕಳು ಹಿರೇಮಣಿಯ ನೇತೃತ್ವದಲ್ಲಿ, ಶಿಕ್ಷಕರು ಸೂಚಿಸಿದ ಚಟುವಟಿಕೆಗಳನ್ನು ಮಾಡುವರು. |
| | 10 ನಿ | | | | | | | | | ಶಿಕ್ಷಕ | ಶಿಕ್ಷಕರು ಮಕ್ಕಳು ಮಾಡಿದ ಚಟುವಟಿಕೆಯನ್ನು ಗಮನಿಸಿ ಸಲಹೆ ನೀಡುವರು. |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ಕಲಿಕಾ ಅಂಶ ಘಟಕದ ಹೆಸರು | ಸಾಮರ್ಥ್ಯ ಗುರಿ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಕಲಿಕಾ ಅಂಶ ಘಟಕದ ಹೆಸರು | ಸಾಮರ್ಥ್ಯ ಗುರಿ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 10 ನಿ | * ಸಹಕಾರ, ಜೀವನ ಕೌಶಲ್ಯ * ನಮ್ಮ ಶರೀರ | * ಸಹಕಾರದಿಂದ ತೊಂದರೆಗಳನ್ನು ನಿವಾರಿಸಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳುವರು. * ದೇಹದ ಭಾಗಗಳು ಮತ್ತು ಅವುಗಳ ಉಪಯೋಗದ ಬಗ್ಗೆ ಅರಿಯುವರು. | – ಪಂಚತಂತ್ರ ಕಥೆಗಳು – ಕಥಾ ಚಿತ್ರ ಸರಣಿಯ ಚಿತ್ರಪಟಗಳು – ದೇಹದ ಹೊರ ಅಂಗಗಳನ್ನು ತೋರಿಸುವ ಚಿತ್ರಪಟಗಳು. | ಶಿಕ್ಷಕ | **ಚಟುವಟಿಕೆ :** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ, ""ಎಷ್ಟಪ್ಪ... ಎಷ್ಟು" ಆಟ ಆಡಿಸುವರು. | * ಸಹಕಾರ ಜೀವನ ಕೌಶಲ್ಯ * ನಮ್ಮ ಶರೀರ | 1ನೇ ತರಗತಿಯ ಅಂಶ ನೋಡಿ | ಮಾನವ ಶರೀರದ ಬಿಡಿ ಭಾಗಗಳ ಚಿತ್ರಪಟ | ಶಿಕ್ಷಕ | * ಒಂದನೇ ತರಗತಿಯಲ್ಲಿ ಸೂಚಿಸಿರುವಂತಹ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 30 ನಿ | | | | ಶಿಕ್ಷಕ | ಶಿಕ್ಷಕರು ಸಹಕಾರ ಮನೋಭಾವಕ್ಕೆ ಸಂಬಂಧಿಸಿದಂತೆ ""ಇರುವೆ ಮತ್ತು ಪಾರಿವಾಳ"ದ ಕಥೆಯನ್ನು ಸ್ವಾರಸ್ಯಭರಿತವಾಗಿ ಹೇಳುವರು.<br>2ನೇ ತರಗತಿಯಲ್ಲಿ ನಡೆಯುವ ಚಟುವಟಿಕೆಯನ್ನು ಮಕ್ಕಳು ಗಮನಿಸುವರು ಮತ್ತು ಕಥೆಯನ್ನು ಆಲಿಸುವರು. | | | | ಶಿಕ್ಷಕ | * ಒಂದನೇ ತರಗತಿಗೆ ಹೇಳಿದ ಕಥೆಯನ್ನು ಅರ್ಥೈಸಿಕೊಳ್ಳುವರು.<br>ಇದರೊಂದಿಗೆ ನಿತ್ಯಜೀವನದಲ್ಲಿ ಕುಟುಂಬದ ಸದಸ್ಯರು ಪರಸ್ಪರ ಹೇಗೆ ಸಹಕಾರ ಮನೋಭಾವದಿಂದ ಇರಬೇಕೆಂಬುದನ್ನು ಶಿಕ್ಷಕರು ಮಕ್ಕಳೊಂದಿಗೆ ಸಂಭಾಷಿಸುವರು. ಸ್ಥಳೀಯ ಪರಿಸರದಲ್ಲಿನ ಸಹಕಾರದ ಅಂಶಗಳನ್ನು ಮಕ್ಕಳ ಜೊತೆಗೆ ಚರ್ಚಿಸುವರು.<br>* ಸಹಕಾರ ತತ್ವ ಕುರಿತಂತೆ ಮಕ್ಕಳಿಗೆ ತಿಳಿದಿರುವ ಕಥೆಗಳನ್ನು ಹೇಳಿಸುವರು. |
| | 30 ನಿ | | | | ಶಿಕ್ಷಕ | **ಚಟುವಟಿಕೆ : (ನಮ್ಮ ಶರೀರ)**<br>* ಶಿಕ್ಷಕರು ಪ್ರಶ್ನೋತ್ತರದ ಮೂಲಕ ನಮ್ಮ ದೇಹದ ಭಾಗಗಳನ್ನು ಮತ್ತು ಅವುಗಳ ಉಪಯೋಗಗಳ ಬಗ್ಗೆ ಪರಿಚಯಿಸುವರು.<br>* ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ, ಚೈತನ್ಯ-1ರ ಶಿಕ್ಷಕರ ಸಾಹಿತ್ಯದಲ್ಲಿರುವ<br>""ಅರೆ ಡಿಂಗು–ಟಕ–ಡಿಂಗು–ಟಕ–ಡಿಂಗ್...<br>ನಾನು ನೋಡುವೆ ಕಣ್‌ಗಳಿಂದಲೇ..........."<br>ಅಭಿನಯ ಗೀತೆಯನ್ನು ಹೇಳಿಕೊಡುವರು. | | | | ಶಿಕ್ಷಕ | **ಚಟುವಟಿಕೆ : (ನಮ್ಮ ಶರೀರ)**<br>* ತರಗತಿ ಒಂದರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವರು. |
| | 10 ನಿ | | | | ಶಿಕ್ಷಕ | * ತರಗತಿ 2ರ ಮಕ್ಕಳು ಮಾಡುವ ಚಟುವಟಿಕೆಯನ್ನು ವೀಕ್ಷಿಸುವರು. | | | | ಶಿಕ್ಷಕ | * ಮಾನವ ಶರೀರದ ಬಿಡಿ ಭಾಗಗಳಾಗಿರುವ ಚಿತ್ರಪಟಗಳನ್ನು ಕ್ರಮವಾಗಿ ಜೋಡಿಸಲು ಶಿಕ್ಷಕರು ಮಕ್ಕಳಿಗೆ ಸೂಚಿಸುವರು. |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4<br>EVS -1 | 15 ನಿ | ಪರಿಸರ ಅಧ್ಯಯನ<br>1. ನಮ್ಮನ್ನು ನೋಡಿದ್ದೀಯಾ ? (ಪ್ರಾಣಿಗಳು) | * ಸುತ್ತಲೂ ಇರುವ ಸಾಮಾನ್ಯ ಪ್ರಾಣಿಗಳು ಮತ್ತು ಸಸ್ಯಗಳನ್ನು ಗುರುತಿಸುವುದು | ಅಭಿನಯ ಗೀತೆ | ಶಿಕ್ಷಕ | **ಪೂರ್ವಸಿದ್ಧತಾ ಸಿದ್ಧತಾ ಚಟುವಟಿಕೆ**<br>ಶಿಕ್ಷಕರು ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಅಭಿನಯ ಗೀತೆಯನ್ನು ಹೇಳಿಕೊಡುವರು.<br>""ದೂರಿ ದೂರಿ..............................................<br>ನಾವು ಪುಟ್ಟ ಮಕ್ಕಳು, ಕಾಡಿಗೆ ಹೋಗಿ ಬಂದೆವು...” | ಪರಿಸರ ಅಧ್ಯಯನ<br>1. ನಮ್ಮ ಸುತ್ತಲಿನ ಪ್ರಾಣಿಗಳು | * ಸ್ಥಳೀಯ ಪ್ರಾಣಿಗಳನ್ನು ಗುರುತಿಸುವುದು. | ಅಭಿನಯ ಗೀತೆ | ಶಿಕ್ಷಕ | **ಪೂರ್ವಸಿದ್ಧತಾ ಚಟುವಟಿಕೆ :**<br>ಒಂದನೇ ತರಗತಿಯಲ್ಲಿ ಸೂಚಿಸಿರುವ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು |
| | 25 ನಿ | | | ವಿವಿಧ ಪ್ರಾಣಿಗಳ ಚಿತ್ರಪಟಗಳು | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>ಶಿಕ್ಷಕರು ಮಕ್ಕಳಿಗೆ ವಿವಿಧ ಪ್ರಾಣಿಗಳ ಚಿತ್ರಪಟಗಳನ್ನು ತೋರಿಸುತ್ತಾ ಸಂಭಾಷಣೆಯ ಮೂಲಕ ಗುರುತಿಸುವಂತೆ ತಿಳಿಸುವರು. ಗುರುತಿಸಿದ ಪ್ರಾಣಿಗಳಿಗೆ ಸಂಬಂಧಿಸಿದಂತೆ ಮಕ್ಕಳಿಂದ ಮಾಹಿತಿ ಸಂಗ್ರಹಿಸುವರು. | | | | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>ಒಂದನೇ ತರಗತಿಯಲ್ಲಿ ಶಿಕ್ಷಕರು ನಿರ್ವಹಿಸುವ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 05 ನಿ | | | ದಿನಪತ್ರಿಕೆಗಳ ಸಾಪ್ತಾಹಿಕ ಪುರವಣಿಗಳು, ವಾರ ಪತ್ರಿಕೆಗಳು | ಶಿಕ್ಷಕ | ಶಿಕ್ಷಕರು ಮಕ್ಕಳಿಗೆ ಪತ್ರಿಕೆಗಳನ್ನು ನೀಡಿ ಅವರಿಗೆ ಪರಿಚಿತ ಪ್ರಾಣಿಗಳ ಚಿತ್ರಗಳನ್ನು ಗುರುತಿಸಿ, ಸಂಗ್ರಹಿಸಲು ಸೂಚನೆ ನೀಡುವರು. | | | | ಹಿರೇಮಣಿ | ಮುಂದಿನ ತರಗತಿಗೆ ಪ್ರತ್ಯೇಕ ವೃತ್ತ ರಚಿಸಿಕೊಂಡು ಸಿದ್ಧರಾಗುವರು. |
| | 25 ನಿ | | | | ಸ್ವಕಲಿಕೆ | ಶಿಕ್ಷಕರು ನೀಡಿರುವ ಸೂಚನೆಯಂತೆ ಚಟುವಟಿಕೆಯಲ್ಲಿ ತೊಡಗುವರು. | | | ವಿವಿಧ ಪ್ರಾಣಿಗಳ ಚಿತ್ರಪಟ, ಪಠ್ಯಪುಸ್ತಕ | ಶಿಕ್ಷಕ | ಶಿಕ್ಷಕರು ಚಟುವಟಿಕೆಯನ್ನು ಮುಂದುವರಿಸುತ್ತಾ ನಮ್ಮ ಸುತ್ತಲಿನ ಪ್ರಾಣಿಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುವರು. |
| | 10 ನಿ | | | | ಶಿಕ್ಷಕ | ಮಕ್ಕಳು ಪತ್ರಿಕೆಗಳಿಂದ ಸಂಗ್ರಹಿಸಿರುವ ಚಿತ್ರಗಳನ್ನು ಗಮನಿಸಿ, ಮೆಚ್ಚುಗೆ ವ್ಯಕ್ತಪಡಿಸುವರು. | | | | ಶಿಕ್ಷಕ | ಒಂದನೇ ತರಗತಿಯ ಮಕ್ಕಳು ಸಂಗ್ರಹಿಸಿದ ಚಿತ್ರಗಳನ್ನು ಗುರುತಿಸಿ ಹೆಸರಿಸುವಂತೆ ಶಿಕ್ಷಕರು ತಿಳಿಸುವರು. |

“ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು”.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ಘಟಕ ಮತ್ತು ಪಾಠದ ಹೆಸರು | ಸಾಮರ್ಥ್ಯ / ಉದ್ದೇಶ | ಬಳಸಬಹುದಾದ ಕಲಿಕೋಪಕರಣ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ಘಟಕ ಮತ್ತು ಪಾಠದ ಹೆಸರು | ಸಾಮರ್ಥ್ಯ / ಉದ್ದೇಶ | ಬಳಸಬಹುದಾದ ಕಲಿಕೋಪಕರಣ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KA-N2 | 30 ನಿ | ಕನ್ನಡ<br>ಠಣ್ ! ಠಣ್ ! ಠಣ ! | * ಸರಳ ಹಾಗೂ ಬಳಕೆಯಲ್ಲಿರುವ ಪದಗಳು, ಗೀತೆಗಳು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು. | ಪಠ್ಯ ಪುಸ್ತಕ | ಶಿಕ್ಷಕರು | **ಕಲಿಕೆಯ ಚಟುವಟಿಕೆ** (ಮುಂದುವರಿದುದು)<br>ಶಿಕ್ಷಕರು "ಠಣ್ ! ಠಣ್ ! ಠಣ !" ಮೊದಲ ಪದ್ಯವನ್ನು ಮೂರು ನಾಲ್ಕು ಬಾರಿ ರಾಗ, ಭಾವ, ಅಭಿನಯದೊಂದಿಗೆ ಹೇಳಿಕೊಡುವರು. ಮಕ್ಕಳು ಶಿಕ್ಷಕರ ಸೂಚನೆಯಂತೆ ಹಾಡುತ್ತಾ ಅಭಿನಯಿಸುವರು.<br>ಝಣ! ಝಣ! ಝಣ!<br>................................<br>.........ಠಣ್! ಠಣ! ಠಣ! | ಕನ್ನಡ<br>1. ಕೋಗಿಲೆ (ಕವನ) | * ಸರಳ ಹಾಗೂ ಬಳಕೆಯಲ್ಲಿರುವ ಪದಗಳ ಗೀತೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು. | ಕೋಗಿಲೆಯ ಚಿತ್ರಪಟ | ಹಿರೇಮಣಿ | **ಕಲಿಕೆಯ ಚಟುವಟಿಕೆ** (ಮುಂದುವರಿದುದು)<br>ಶಿಕ್ಷಕರ ಸೂಚನೆಯಂತೆ ಮಕ್ಕಳು "ಕೋಗಿಲೆ" ಕವನದ ಮೊದಲ ಚರಣವನ್ನು ಬರೆಯುವರು. |
| | 10 ನಿ | | | | ಶಿಕ್ಷಕ | ಡಿ.ಎಸ್.ಇ.ಆರ್.ಟಿ. ವತಿಯಿಂದ ಸರಬರಾಜಾಗಿರುವ "ಹುಯ್ಯೋ ಹುಯ್ಯೋ ಮಳೆರಾಯ....." ಧ್ವನಿಸುರುಳಿಯನ್ನು ಕೇಳಿಸುವುದು. | | | | ಶಿಕ್ಷಕ | ಮಕ್ಕಳ ಬರವಣಿಗೆಯನ್ನು ಪರಿಶೀಲಿಸಿ ಸಲಹೆ ನೀಡುವರು. |
| | 30 ನಿ | | | ಧ್ವನಿಸುರುಳಿ ಮತ್ತು ಟೇಪ್‌ರೆಕಾರ್ಡರ್ | ಸ್ವಕಲಿಕೆ | ಮೇಲಿನ ಧ್ವನಿಸುರುಳಿಯನ್ನು ಆಲಿಸುವರು. | | | ಪಠ್ಯ ಪುಸ್ತಕ | ಶಿಕ್ಷಕರು | ಶಿಕ್ಷಕರು ಕೋಗಿಲೆ ಕವನದ ಮೊದಲೆರಡು ಚರಣಗಳನ್ನು ರಾಗ, ಹಾವ-ಭಾವದೊಂದಿಗೆ ಹಾಡುವರು ಮತ್ತು ಮಕ್ಕಳಿಂದ ಹಾಡಿಸುವರು. |
| | 10 ನಿ | | | | ಸ್ವಕಲಿಕೆ | 2ನೇ ತರಗತಿಯ ಮಕ್ಕಳು ಹಾಡುವುದನ್ನು ಆಲಿಸುವರು. | | | | ಶಿಕ್ಷಕ | ಆಯ್ದ ಮಕ್ಕಳಿಂದ ಪುಸ್ತಕ ನೋಡಿಕೊಂಡು ಈ ಹಿಂದೆ ಹೇಳಿದ ಚರಣಗಳನ್ನು ರಾಗವಾಗಿ ಹಾಡಿಸುವರು. |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2<br>M -2 | 30 ನಿ | ಗಣಿತ<br>ಸಂಖ್ಯೆಗಳು | * ಒಂದರಿಂದ ಐದರವರೆಗಿನ ಸಂಖ್ಯೆಗಳನ್ನು ಗುರುತಿಸುವುದು, ಓದುವುದು, ಎಣಿಸುವುದು ಮತ್ತು ಬರೆಯುವುದು. | ಮಿಂಚುಪಟ್ಟಿ<br>ಸ್ಥಳೀಯವಾಗಿ ದೊರೆಯುವ ಬೀಜಗಳು, ಕಡ್ಡಿಗಳು, ಗೋಲಿಗಳು, ಮಿಂಚು ಪಟ್ಟಿಗಳು | ಶಿಕ್ಷಕ | **ಕಲಿಕೆಯ ಚಟುವಟಿಕೆ** (ಮುಂದುವರಿದುದು) :<br>ಶಿಕ್ಷಕರು ಮಿಂಚುಪಟ್ಟಿಗಳನ್ನು ಬಳಸಿ, ಮಕ್ಕಳಿಗೆ ಸಂಖ್ಯೆಗಳನ್ನು ಗುರುತಿಸಲು ಹೇಳುವರು.<br>* ಶಿಕ್ಷಕರು ಮಕ್ಕಳನ್ನು ಚಿಕ್ಕ–ಚಿಕ್ಕ ಗುಂಪುಗಳಲ್ಲಿ ಕೂರಿಸಿ, ಪ್ರತಿ ಗುಂಪಿಗೆ ಒಂದೊಂದು ಮಿಂಚುಪಟ್ಟಿಯನ್ನು ಮತ್ತು ಗೋಲಿ/ಬೀಜಗಳನ್ನು ನೀಡಿ, ಮಿಂಚುಪಟ್ಟಿಯಲ್ಲಿರುವ ಅಂಕಿಗಳಿಗನುಗುಣವಾಗಿ ಎಣಿಸಿ ಇಡಲು ಹೇಳುವರು.<br>* ಪ್ರತಿ ತಂಡಕ್ಕೂ ಮಿಂಚುಪಟ್ಟಿಗಳನ್ನು ಬದಲಾಯಿಸುತ್ತಾ ಚಟುವಟಿಕೆಯನ್ನು ಮುಂದುವರಿಸಲು ತಿಳಿಸುವರು.<br>* ಬಾಣದ ಗುರುತಿರುವ ದೊಡ್ಡ ಅಂಕಿಗಳ ಮಿಂಚುಪಟ್ಟಿ ನೀಡಿ, ಬಾಣದ ಗುರುತಿಗೆ ಅನುಗುಣವಾಗಿ ಬೆರಳಾಡಿಸಲು ಹೇಳುವರು. (ಶಿಕ್ಷಕರು ಮೊದಲು ಬೆರಳಾಡಿಸುವುದನ್ನು ತೋರಿಸಿಕೊಡುವರು). | ಗಣಿತ<br>ಸಂಖ್ಯೆಗಳು | * ಒಂದರಿಂದ ತೊಂಬತ್ತೊಂಬತ್ತರವರೆಗಿನ ಸಂಖ್ಯೆಗಳನ್ನು ಗುರುತಿಸುವುದು, ಓದುವುದು, ಎಣಿಸುವುದು ಮತ್ತು ಬರೆಯುವುದು | ಸ್ಥಳೀಯವಾಗಿ ದೊರೆಯುವ ಬೀಜಗಳು, ಕಡ್ಡಿಗಳು, ಗೋಲಿಗಳು, ಮಿಂಚು ಪಟ್ಟಿಗಳು | ಹಿರೇಮಣಿ | **ಕಲಿಕೆಯ ಚಟುವಟಿಕೆ** (ಮುಂದುವರಿದುದು)<br>* ಮಕ್ಕಳು ಹಿರೇಮಣಿಯ ನೇತೃತ್ವದಲ್ಲಿ, ಹಿಂದಿನ ದಿನ ಕಲಿತ, 20 ರಿಂದ 50ರವರೆಗಿನ ಸಂಖ್ಯೆಗಳನ್ನು ಅಂದವಾಗಿ ಬರೆಯಲು ಹೇಳುವುದು.<br>* ಮೇಲಿನ ಚಟುವಟಿಕೆಯಲ್ಲಿ ಎಲ್ಲ ಮಕ್ಕಳು ತೊಡಗುವರು. |
| | 10 ನಿ | | | | ಶಿಕ್ಷಕ | ಮಕ್ಕಳು ಮೇಲೆ ಸೂಚಿಸಿರುವಂತೆ ಅಂಕಿಗಳ ಮಿಂಚುಪಟ್ಟಿಗಳ ಮೇಲೆ ಬೆರಳನ್ನು ಆಡಿಸುವಂತೆ ಸೂಚನೆ ನೀಡುವುದು. | | | | ಶಿಕ್ಷಕ | ಮಕ್ಕಳು ಬರೆದಿರುವ 20 ರಿಂದ 50ರವರೆಗಿನ ಸಂಖ್ಯೆಗಳನ್ನು ಪರಿಶೀಲಿಸಿ ಸಲಹೆ ನೀಡುವರು. |
| | 30 ನಿ | | | | ಭಾಗಶಃ ಶಿಕ್ಷಕ | ಶಿಕ್ಷಕರ ಸೂಚನೆಯಂತೆ, ಮಕ್ಕಳು ಚಟುವಟಿಕೆ ಮಾಡುವರು. | | | | ಶಿಕ್ಷಕ | * 20 ರಿಂದ 50ರವರೆಗಿನ ಮಿಂಚುಪಟ್ಟಿಗಳನ್ನು ನೀಡಿ, ಅವುಗಳನ್ನು ಗುರುತಿಸಿ, ಓದಲು ಹೇಳುವರು.<br>* ವಿದ್ಯಾರ್ಥಿಗಳ ಚಿಕ್ಕ–ಚಿಕ್ಕ ಗುಂಪುಗಳನ್ನು ಮಾಡಿ, ಪ್ರತಿ ತಂಡಕ್ಕೆ ಮಿಂಚುಪಟ್ಟಿ ಹಾಗು ಮಣಿಗಳನ್ನು ನೀಡಿ, ಮಿಂಚುಪಟ್ಟಿಗಳಲ್ಲಿರುವ ಸಂಖ್ಯೆಗೆ ಅನುಗುಣವಾಗಿ ಮಣಿ/ಬೀಜಗಳನ್ನು ಎಣಿಸಿ ಇಡಲು ಹೇಳುವರು.<br>* ಪ್ರತಿ ಗುಂಪಿಗೆ ಕಾರ್ಡ್‌ಗಳನ್ನು ಬದಲಾಯಿಸುತ್ತಾ ಚಟುವಟಿಕೆಯನ್ನು ಮುಂದುವರಿಸುವರು. |
| | 10 ನಿ | | | | | * ಮಕ್ಕಳ ಚಟುವಟಿಕೆ ಗಮನಿಸಿ, ಸಲಹೆ ನೀಡುವರು (ಮಾರ್ಗದರ್ಶನ ನೀಡುವರು) | | | | | * ಮಕ್ಕಳ ಚಟುವಟಿಕೆಯನ್ನು ಗಮನಿಸಿ, ಸಲಹೆ ಮಾರ್ಗದರ್ಶನ ನೀಡುವರು. |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 EVS -2 | 30 ನಿ | ಪರಿಸರ ಅಧ್ಯಯನ 1. ನಮ್ಮನ್ನು ನೋಡಿದ್ದೀಯಾ (ಪ್ರಾಣಿಗಳು) | * ಸುತ್ತಲೂ ಇರುವ ಪ್ರಾಣಿಗಳು ಮತ್ತು ಸಸ್ಯಗಳನ್ನು ಗುರುತಿಸುವುದು. | ವಿವಿಧ ಸಸ್ಯಗಳ ಚಿತ್ರಪಟಗಳು | ಶಿಕ್ಷಕ | **ಕಲಿಕೆಯ ಚಟುವಟಿಕೆ :** ಶಿಕ್ಷಕರ ನಿರ್ದೇಶನದಂತೆ ಮಕ್ಕಳು ತಮ್ಮ ಸ್ಥಳೀಯ ಪರಿಸರದಲ್ಲಿ ಕಂಡುಬರುವ / ನೋಡಿರುವ ಪ್ರಾಣಿಗಳ ಹೆಸರುಗಳನ್ನು ಹೇಳುವರು. | ಪರಿಸರ ಅಧ್ಯಯನ 1. ನಮ್ಮ ಸುತ್ತಲಿನ ಪ್ರಾಣಿಗಳು | * ಸ್ಥಳೀಯ ಪ್ರಾಣಿಗಳನ್ನು ಗುರುತಿಸುವುದು | ಪ್ರಾಣಿಗಳ ಚಿತ್ರಗಳು / ಮಿಂಚುಪಟ್ಟಿಗಳು | ಶಿಕ್ಷಕ | **ಕಲಿಕೆಯ ಚಟುವಟಿಕೆ :** ಒಂದನೇ ತರಗತಿಯ ಮಕ್ಕಳು ಪಟ್ಟಿ ಮಾಡುವ ಪ್ರಾಣಿಗಳ ಬಗ್ಗೆ ಒಬ್ಬ ವಿದ್ಯಾರ್ಥಿ ಒಂದೊಂದು ಪ್ರಾಣಿಯ ಬಗ್ಗೆ ಎರಡು ಅಥವಾ ಮೂರು ವಾಕ್ಯಗಳನ್ನು ಹೇಳುವರು. |
| | 05 ನಿ | | | | ಶಿಕ್ಷಕ | 2ನೇ ತರಗತಿಗೆ ನೀಡುವ ಸೂಚನೆ ಆಲಿಸುವರು | | | | ಶಿಕ್ಷಕ | ಶಿಕ್ಷಕರು ಕೆಲವು ಪ್ರಾಣಿಗಳ ಚಿತ್ರ / ಕಾರ್ಡ್‌ಗಳನ್ನು ಮಕ್ಕಳಿಗೆ ನೀಡಿ, ತಮಗೆ ದೊರೆತ ಪ್ರಾಣಿಗಳ ಕೂಗುಗಳನ್ನು ಅನುಕರಣೆ ಮತ್ತು ಪ್ರಾಣಿಗಳಿಗೆ ತಕ್ಕಂತೆ ಅಭಿನಯ ಮಾಡಲು ಸೂಚಿಸುವರು. |
| | 35 ನಿ | | | | ಶಿಕ್ಷಕ | ಶಿಕ್ಷಕರು ಪಠ್ಯದಲ್ಲಿರುವ ಸಸ್ಯಗಳ ಚಿತ್ರಗಳನ್ನು ಪ್ರದರ್ಶಿಸುತ್ತಾ ಅವುಗಳ ಹೆಸರುಗಳನ್ನು ಹೇಳಲು ಹೇಳುವರು. ಮಕ್ಕಳು ಗುರುತಿಸದಿದ್ದಲ್ಲಿ, ಶಿಕ್ಷಕರು, ಅವುಗಳನ್ನು ಹೆಸರಿಸಿ, ಮಕ್ಕಳಿಗೆ ಪರಿಚಯಿಸುವರು. | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ, ಮಕ್ಕಳು ಹಿರೇಮಣಿಯ ನೇತೃತ್ವದಲ್ಲಿ ಚಟುವಟಿಕೆಯಲ್ಲಿ ತೊಡಗುವರು. |
| | 10 ನಿ | | | | ಹಿರೇಮಣಿ | ಹಿರೇಮಣಿಯ ಸಹಾಯದಿಂದ, ಮಕ್ಕಳು ಮತ್ತೊಮ್ಮೆ ಪಠ್ಯದಲ್ಲಿರುವ ಸಸ್ಯಗಳ ಚಿತ್ರಗಳನ್ನು ಗುರುತಿಸಿ ಹೆಸರಿಸುವರು. | | | | ಶಿಕ್ಷಕ | ಕೆಲವು ಮಕ್ಕಳು ನಿರ್ವಹಿಸಿದ ಚಟುವಟಿಕೆಯನ್ನು ಪರಿಶೀಲಿಸಿ, ಮಾರ್ಗದರ್ಶನ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

## ದಿನ – 2



| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕ | ಸಾಮರ್ಥ್ಯ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕ | ಸಾಮರ್ಥ್ಯ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 SUPW -1 | 20 ನಿ | ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ / ಏಂತ ಚಿತ್ರ ಚಿತ್ರಗಳಿಗೆ ಬಣ್ಣ ತುಂಬು. | * ಸಸ್ಯ ಮತ್ತು ಪ್ರಾಣಿಗಳ ಸ್ವಾಭಾವಿಕ ಬಣ್ಣಗಳನ್ನು ಗುರುತಿಸಿ, ಅವುಗಳಿಗೆ ಅನುಗುಣವಾಗಿ ಬಣ್ಣ ತುಂಬುವುದು. | ವಿವಿಧ ಪ್ರಾಣಿ ಮತ್ತು ಸಸ್ಯಗಳ ಮುದ್ರಿತ / ಬರೆದ ರೇಖಾ ಚಿತ್ರಗಳು | ಶಿಕ್ಷಕ | ಮಕ್ಕಳಿಗೆ ವಿವಿಧ ಪ್ರಾಣಿ ಮತ್ತು ಸಸ್ಯಗಳ ಮುದ್ರಿತ / ಬರೆದ ರೇಖಾಚಿತ್ರಗಳನ್ನು ನೀಡಿ. ಮೊದಲಿಗೆ ಆ ಪ್ರಾಣಿ ಅಥವಾ ಸಸ್ಯಗಳ ನೈಜ ಬಣ್ಣ ಗುರುತಿಸಲು ಹೇಳುವರು. ನಂತರ, ಪ್ರಾಣಿ / ಸಸ್ಯಗಳ ಬಣ್ಣಗಳಿಗೆ ಅನುಗುಣವಾಗಿ ಬಣ್ಣ ತುಂಬುವಂತೆ ಸೂಚಿಸುವರು. | S.U.P.W. ಚಿತ್ರಗಳಿಗೆ ಬಣ್ಣ ತುಂಬು | * ಸಸ್ಯ ಮತ್ತು ಪ್ರಾಣಿಗಳ ಸ್ವಾಭಾವಿಕ ಬಣ್ಣಗಳನ್ನು ಗುರುತಿಸಿ ಅವುಗಳಿಗೆ ಅನುಗುಣವಾಗಿ ಬಣ್ಣ ತುಂಬುವುದು | ವಿವಿಧ ಪ್ರಾಣಿಗಳ ಸಸ್ಯಗಳ ಮುದ್ರಿತ / ಬರೆದ ರೇಖಾಚಿತ್ರಗಳು | ಶಿಕ್ಷಕ | ಒಂದನೇ ತರಗತಿಗೆ ಅಳವಡಿಸಲಾದ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 50 ನಿ | | | | ಶಿಕ್ಷಕ | ಶಿಕ್ಷಕರ ಸೂಚನೆಯಂತೆ ಮಕ್ಕಳು ತಮಗೆ ದೊರೆತಿರುವ ರೇಖಾ ಚಿತ್ರಗಳಿಗೆ ಬಣ್ಣ ತುಂಬುವರು. | | | | ಹಿರೇಮಣಿ | ಒಂದನೇ ತರಗತಿಯಂತೆ ತಮಗೆ ದೊರೆತ ಚಿತ್ರಗಳಿಗೆ ಅನುಗುಣವಾಗಿ ಬಣ್ಣ ತುಂಬುವರು. |
| | 10 ನಿ | | | | ಶಿಕ್ಷಕ | ಮಕ್ಕಳು ಚಿತ್ರಗಳಿಗೆ ತುಂಬಿದ ಬಣ್ಣಗಳನ್ನು ಪರಿಶೀಲಿಸಿ, ಅವುಗಳು ನೈಜ ಬಣ್ಣಕ್ಕೆ ಸಾಮ್ಯತೆ ಇದೆಯೇ ಎಂದು ಹೋಲಿಸಿ ನಂತರ ಮಕ್ಕಳಿಗೆ ಸಲಹೆ ನೀಡುವರು. | | | | ಶಿಕ್ಷಕ | ಮಕ್ಕಳು ಪ್ರಾಣಿಗಳ ಚಿತ್ರಗಳಿಗೆ ತುಂಬಿದ ಬಣ್ಣಗಳು ಅವುಗಳ ನೈಜಬಣ್ಣಕ್ಕೆ ಸರಿಹೊಂದುತ್ತವೆಯೇ ಎಂದು ಪರಿಶೀಲಿಸಿ ಸಲಹೆ/ ಮಾರ್ಗದರ್ಶನ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>K -3 | 10 ನಿ | ಕನ್ನಡ<br>1. ಠಣ್ ! ಠಣ ! ಠಣ ! | * ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸ ಗೀತೆಗಳನ್ನು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವರು. | | ಶಿಕ್ಷಕ | ಶಿಕ್ಷಕರು ಡಿ.ಎಸ್.ಇ.ಆರ್.ಟಿ. ವತಿಯಿಂದ ನೀಡಲಾದ ""ದೀಪ್ ದೀಪ್ ನಂಜುಂಡ"...... ಈ ಧ್ವನಿಸುರುಳಿಯನ್ನು ಮಕ್ಕಳಿಗೆ ಕೇಳಿಸಲು ಸಿದ್ಧತೆ ಮಾಡಿಕೊಳ್ಳುವರು ಮತ್ತು ಆಲಿಸಲು ಸೂಚನೆ ನೀಡುವರು. | ಕನ್ನಡ<br>1. ಕೋಗಿಲೆ (ಕವನ) | * ಸರಳ ಹಾಗೂ ಬಳಕೆಯಲ್ಲಿರದ ಜನಪ್ರಿಯ ಪ್ರಾಸ ಗೀತೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು | | ಹಿರೇಮಣಿ | ಹಿಂದಿನ ಅವಧಿಯಲ್ಲಿ ಕಲಿತ ಕೋಗಿಲೆ ಪದ್ಯ ಭಾಗವನ್ನು ಪುಸ್ತಕ ನೋಡಿಕೊಂಡು ಹಾಡುವರು. |
| | 30 ನಿ | | | ಧ್ವನಿಸುರುಳಿ, ಟೇಪ್ ರೆಕಾರ್ಡರ್ | | ಮಕ್ಕಳು ಧ್ವನಿಸುರುಳಿಯನ್ನು ಆಲಿಸುವರು | | | ಪಠ್ಯಪುಸ್ತಕ<br>ಪ್ರಾಸ ಪದಗಳ ಮಿಂಚುಪಟ್ಟಿ | ಶಿಕ್ಷಕ | ಶಿಕ್ಷಕರು ಕೋಗಿಲೆ ಕವನದ ಕೊನೆಯ ಭಾಗವಾದ ""ಸುತ್ತಲೂ........... ಕುಹೂ ಕುಹೂ".ನ್ನು ರಾಗವಾಗಿ, ಭಾವಪೂರ್ಣವಾಗಿ ಹಾಡುವರು ಮತ್ತು ಮಕ್ಕಳಿಂದ ಹಾಡಿಸುವರು.<br>ಈ ಪದ್ಯದಲ್ಲಿ ಬರುವ ಹೊಸ ಪದಗಳಿಗೆ ಅರ್ಥವಿವರಣೆಯನ್ನು ನೀಡುವರು. ಪದ್ಯದಲ್ಲಿರುವ ಬರುವ ಪ್ರಾಸಪದಗಳನ್ನು ಪಟ್ಟಿ ಮಾಡಿಸುವರು. |
| | 05 ನಿ | | | | | ಆಲಿಸುವ ಪ್ರಕ್ರಿಯೆ ಮುಂದುವರಿದಿದೆ. | | | | ಶಿಕ್ಷಕ | ಶಿಕ್ಷಕರು ಮಕ್ಕಳಿಗೆ ಈ ಪದ್ಯಭಾಗವನ್ನು ಅಂದವಾಗಿ ಮತ್ತು ಸ್ಫುಟವಾಗಿ ಬರೆಯುವಂತೆ ಸೂಚನೆ ನೀಡುವರು. |
| | 25 ನಿ | | | ನದಿಯಲ್ಲಿ ಬಕ ನಿಂತಿರುವ ಚಿತ್ರಪಟ | ಶಿಕ್ಷಕ | ಶಿಕ್ಷಕರು ಪದ್ಯದ ಎರಡನೇ ಭಾಗವಾದ ""ನದಿಯಲೊಂದು........" ಮೊದಲಿಗೆ ಮೂರು–ನಾಲ್ಕು ಬಾರಿ ರಾಗ, ಭಾವ, ಮತ್ತು ಅಭಿನಯದೊಂದಿಗೆ ಹೇಳಿಕೊಡುವರು. ಮಕ್ಕಳು ಶಿಕ್ಷರ ಸೂಚನೆಯಂತೆ ಹಾಡುತ್ತಾ ಅಭಿನಯಿಸುವರು.<br>""ನದಿಯಲೊಂದು...............................<br>.............................................................<br>............................ತಕಾ ! ತಕ ! ತಕ !" | | | | ಹಿರೇಮಣಿ | **ಅಭ್ಯಾಸ ಮತ್ತು ಬಳಕೆಯ ಹಂತ / ಪುನರ್ಬಲನ ಚಟುವಟಿಕೆ :**<br>ಮಕ್ಕಳು ಹಿರೇಮಣಿಯ ನೇತೃತ್ವದಲ್ಲಿ ಬರವಣಿಗೆಯಲ್ಲಿ ತೊಡಗುವರು. |
| | 10ನಿ | | | | ಶಿಕ್ಷಕ | ಮಕ್ಕಳ ಅಭಿನಯವನ್ನು ವೀಕ್ಷಿಸುತ್ತಾ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಮಕ್ಕಳ ಬರವಣಿಗೆಯನ್ನು ಪರಿಶೀಲಿಸಿ, ಮಾರ್ಗದರ್ಶನ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2<br>ಜೀ.ವಿ.-2 | 10 ನಿ | "ಜೀವನ ವಿಜ್ಞಾನ"<br>* ಭಾವನಾತ್ಮಕ ಹಾಗೂ ನೈತಿಕ ವ್ಯಕ್ತಿತ್ವದ ವಿಕಾಸ * ಬೌದ್ಧಿಕ ಆಟಗಳು | * ಕಥೆಯನ್ನು ಆಲಿಸಿ, ಅದರ ನೀತಿಯನ್ನು ಅರ್ಥಮಾಡಿಕೊಳ್ಳುವುದು.<br>* ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು. | ಗ್ರಂಥಾಲಯದಲ್ಲಿ ಲಭ್ಯವಿರುವ ಪಂಚತಂತ್ರ/ ನೀತಿ ಚಿಂತಾಮಣಿ ಕಥೆ ಪುಸ್ತಕ | ಶಿಕ್ಷಕ | ಎರಡನೇ ತರಗತಿಯ ಮಕ್ಕಳ ಅಭಿನಯವನ್ನು ವೀಕ್ಷಿಸುವರು | "ಜೀವನ ವಿಜ್ಞಾನ"<br>* ಭಾವನಾತ್ಮಕ ಹಾಗೂ ನೈತಿಕ ವ್ಯಕ್ತಿತ್ವದ ವಿಕಾಸ * ಬೌದ್ಧಿಕ ಆಟಗಳು | * ಕಥೆಯನ್ನು ಆಲಿಸಿ, ಅದರ ನೀತಿಯನ್ನು ಅರ್ಥಮಾಡಿಕೊಳ್ಳುವುದು.<br>* ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳುವರು. | ಗ್ರಂಥಾಲಯದಲ್ಲಿ ಲಭ್ಯವಿರುವ ಪಂಚತಂತ್ರ / ನೀತಿ ಚಿಂತಾಮಣಿ ಕಥೆಯ ಪುಸ್ತಗಳು | ಶಿಕ್ಷಕ | ಶಿಕ್ಷಕರ ಸೂಚನೆಯಂತೆ, ಮಕ್ಕಳು ವಿವಿಧ ಚಟುವಟಿಕೆಗಳ ಅಭಿನಯ ಮಾಡುವರು. (ಎಸೆಯುವುದು, ನೀರು ಕುಡಿಯುವುದು, ಓಡುವುದು ಇತ್ಯಾದಿ). |
| | 30 ನಿ | | | | ಶಿಕ್ಷಕ | ಶಿಕ್ಷಕರು ಎರಡೂ ತರಗತಿಯ ಮಕ್ಕಳಿಗೆ ಅವರ ವಯೋಮಾನಕ್ಕೆ ಅನುಗುಣವಾಗಿ ಪ್ರಾಮಾಣಿಕತೆಯ ನೀತಿಯನ್ನು ಹೊಂದಿರುವ ಪಂಚತಂತ್ರದ ಕಥೆಯನ್ನು ಸ್ವಾರಸ್ಯಕರವಾಗಿ ಸರಳ ವಿವರಣೆಯೊಂದಿಗೆ ಹೇಳುವರು.<br>ಮಕ್ಕಳು ಕಥೆಯನ್ನು ಆಲಿಸಿ ಅರ್ಥ ಮಾಡಿಕೊಳ್ಳುವರು. | | | | ಶಿಕ್ಷಕ | ಮಕ್ಕಳು ಕಥೆಯನ್ನು ಆಲಿಸಿ ಅರ್ಥ ಮಾಡಿಕೊಳ್ಳುವರು. |
| | 35 ನಿ | | | | ಶಿಕ್ಷಕ | ಶಿಕ್ಷಕರು ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ, ಒಂದು ಕಥೆಯಿಂದ ವಿದ್ಯಾರ್ಥಿಗಳು ಹೂವು / ಹಣ್ಣು / ಪ್ರಾಣಿಗಳ ಹೆಸರುಗಳನ್ನು ಹೇಳಿಸುವರು.<br>ಮುಂದೆ–ಮುಂದೆ ಹೋದಂತೆ ವಿದ್ಯಾರ್ಥಿಗಳು ಹಿಂದಿನವರು ಹೇಳಿದ ಹೆಸರು ನೆನಪಿಸಿಕೊಂಡು ಹೇಳುತ್ತ ಪಟ್ಟಿಯನ್ನು ಮುಂದುವರಿಸುತ್ತಾ ಹೋಗಬೇಕು.<br>1 2<br>(ಉದಾ : ಹುಲಿ............ಹುಲಿ, ಸಿಂಹ.................<br>3<br>ಹುಲಿ, ಸಿಂಹ, ಜಿಂಕೆ.............) | | | | | ಒಂದನೇ ತರಗತಿಯಲ್ಲಿ ಆಡಿಸುತ್ತಿರುವ ಆಟದಲ್ಲಿ ಪಾಲ್ಗೊಳ್ಳುವರು. |
| | 5 ನಿ | | | | ಶಿಕ್ಷಕ | ಆಟದಲ್ಲಿ ಭಾಗವಹಿಸಿ, ವಿಜೇತರಾದ ಮಕ್ಕಳನ್ನು ಅಭಿನಂದಿಸಿ, ಚಪ್ಪಾಳೆಯ ಮೂಲಕ ಪ್ರೋತ್ಸಾಹಿಸುವುದು ಮತ್ತು ಉಳಿದ ಮಕ್ಕಳಿಗೆ, ಮುಂದಿನ ಭಾರಿ ಹೆಚ್ಚಿನ ತಯಾರಿಯೊಂದಿಗೆ ಪಾಲ್ಗೊಳ್ಳಿ ಎಂಬ ಸೂಚನೆ ನೀಡುವುದು. | | | | | ಸೂಚನೆ ಆಲಿಸಿ ಪಾಲ್ಗೊಳ್ಳುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".